# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:** | 2049 |
| **ಸದಸ್ಯರ ಹೆಸರು:** | ಶ್ರೀಮತಿ ಎಸ್. ವೀಣಾ ಅಚ್ಚಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) |
| **ಉತ್ತರಿಸಬೇಕಾದ ದಿನಾಂಕ:** | 24-03-2021 |
| **ಉತ್ತರಿಸುವ ಸಚಿವರು:** | ಕಂದಾಯ ಸಚಿವರು. |

| ಕ್ರ. ಸಂ. | ಪ್ರಶ್ನೆ | ವಿವರ |
|---|---|---|
| ಅ) | ಕೊಡಗು ಜಿಲ್ಲೆಯಲ್ಲಿ ಯರವ ಸಮುದಾಯಕ್ಕೆ ಈ ಹಿಂದೆ ನೀಡುತ್ತಿದ್ದಂತೆ ಪಂಜರಿ, ಪಣಿಯರವ ಎಂಬ ಮೂಲ ಹೆಸರುಗಳನ್ನು ಪ್ರಮಾಣ ಪತ್ರ ಗುರುತಿನ ಚೀಟಿ ಹಾಗೂ ಇತರೇ ದಾಖಲಾತಿಗಳಲ್ಲಿ ನಮೂದಿಸದೇ ಯರವ ಎಂದು ನಮೂದಿಸಿ ನೀಡುತ್ತಿರುವುದರಿಂದ ಸಮುದಾಯದ ಮೂಲಕ್ಕೆ ಕಂಟಕ ಎದುರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರೆ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳ ಮೀಸಲಾತಿ) ಅಧಿನಿಯಮ, 1990 ರನ್ವಯ ಕೇಂದ್ರ ಸರ್ಕಾರದ ಅಧಿಸೂಚನೆ ಸಂಖ್ಯೆ BC-10616/34/76-SCT-V ದಿನಾಂಕ: 27.07.1977 ರಲ್ಲಿ ಹೊರಡಿಸಲಾದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜಾತಿ ಪಟ್ಟಿಯಲ್ಲಿರುವ ಹೆಸರುಗಳನ್ನು ನಾಡಕಛೇರಿ ತಂತ್ರಾಂಶದಲ್ಲಿ ಅಳವಡಿಸಿ, ಸದರಿ ಪಟ್ಟಿಯಲ್ಲಿರುವ ಜನಾಂಗದವರಿಗೆ ನಿಯಮಾನುಸಾರ ಜಾತಿ ಪ್ರಮಾಣ ಪತ್ರವನ್ನು ನಾಡಕಛೇರಿ ಮೂಲಕ ವಿತರಿಸಲಾಗುತ್ತಿದೆ. ಸದರಿ ಪರಿಶಿಷ್ಟ ಪಂಗಡ ಜಾತಿಗಳ ಪಟ್ಟಿಯಲ್ಲಿ ಯರವ ಜಾತಿಯ ಹೆಸರನ್ನು ಮಾತ್ರ ನಮೂದಿಸಿದ್ದು, ಸದರಿ ಜಾತಿಯ ಹೆಸರಿನ ಜಾತಿ ಪ್ರಮಾಣ ಪತ್ರವನ್ನು ವಿತರಿಸಲಾಗುತ್ತಿದೆ.<br><br>ಕೇಂದ್ರ ಸರ್ಕಾರದ ಅಧಿಸೂಚನೆ ಸಂಖ್ಯೆ BC-10616/34/76-SCT-V ದಿನಾಂಕ: 27.07.1977 ರಲ್ಲಿ ಹೊರಡಿಸಲಾದ ಪರಿಶಿಷ್ಟ ಪಂಗಡಗಳ ಜಾತಿ ಪಟ್ಟಿಯಲ್ಲಿ ಪಂಜರಿ ಯರವ ಮತ್ತು ಪಣಿ ಯರವ ಜಾತಿಗಳ ಹೆಸರುಗಳು ನಮೂದಾಗದೇ ಇರುವುದರಿಂದ, ಪಂಜರಿ ಯರವ ಮತ್ತು ಪಣಿ ಯರವ ಎಂದು ಜಾತಿ ಪ್ರಮಾಣ ಪತ್ರದಲ್ಲಿ ನಮೂದಿಸಿ, ಪ್ರಮಾಣ ಪತ್ರವನ್ನು ವಿತರಿಸಲು ಅವಕಾಶವಿರುವುದಿಲ್ಲ. |
| ಆ) | ಬಂದಿದಲ್ಲಿ, ಈ ಹಿಂದಿನಂತೆ ಪಂಜಿರಿ ಯರವ, ಪಣಿ ಯರವ ಎಂದು ನಮೂದಿಸಿ ಪ್ರಮಾಣ ಪತ್ರ, ಗುರುತಿನ ಚೀಟಿ ಹಾಗೂ ಇತರ ದಾಖಲಾತಿಗಳನ್ನು ನೀಡಲು ಕೂಡಲೇ ಕ್ರಮ ಕೈಗೊಳ್ಳಲಾಗುವುದೇ? | |

**ಸಂಖ್ಯೆ: ಕಂಇ 17 ಎಜಿಎಸ್ 2021**

**(ಆರ್.ಅಶೋಕ)**
ಕಂದಾಯ ಸಚಿವರು